ಈಗ ಇವರನ್ನ ವಾಪಸ್ ಬಿಡೋಕ್ಕೆ ಕಾರ್ ಬೇಕೇನೋ, ಅತ್ತೆ... ನಾವು...

ಇಲ್ಲಮ್ಮ.. ನಂಗೆ ಕಾರು ಬೇಡ ಹತ್ತಿರ ಇದೆ ನಾನು ಇಳಿದುಕೊಂಡಿರುವ ಹೊಟೇಲ್, ನಡ್ಕೊಂಡೇ ಹೋಗ್ತೀನಿ... ನೀವು ಹೊರಡಿ... ನಾನೇನಾದರೂ ಉತ್ತರಿಸುವ ಮುನ್ನವೇ ವಿಶ್ವಾಸ್ ಹೇಳಿದ. ನಾನು ಉಗುಳು ನುಂಗಿ ಸುಮ್ಮನೆ ನಿಂತೆ.

ಇನ್ನೊಂದು ಕಾರಲ್ಲಿ ನರಹರಿ ಮಕ್ಕಳನ್ನು ಪೈಂಟಿಂಗ್ ಕ್ಲಾಸಿಗೆ ಕರ್ಕೊಂಡು ಹೋಗಿದ್ದಾನೆ. ಮಕ್ಕಳು ಇನ್ನೇನು ಬರೋ ಹೊತ್ತು... ಅತ್ತೆ ಹೇಳಿದಾಗ ತಲೆಯಾಡಿಸಿದೆ. ಮಕ್ಕಳನ್ನು ಪೈಂಟಿಂಗ್ ಕ್ಲಾಸಿಗೆ ಸೇರಿಸಿರುವುದು ನಾನು, ಮಕ್ಕಳನ್ನು ಕರೆದುಕೊಂಡು ಹೋಗಿ, ಕರೆದುಕೊಂಡು ಬರುವ ಕೆಲಸವನ್ನು ನರಹರಿಗೆ ಒಪ್ಪಿಸಿರುವುದು ನಾನು... ಆದರೆ ಅದ್ಯಾವುದರ ಅರಿವು ನಂಗೆ ಇಲ್ಲ ಎಂಬಂತೆಯೇ ಅತ್ತೆಯ ಮಾತು. ನನಗೆ ಮಾತಿಗೆ ಮಾತು ಆಡಲೂ ಬೇಸರ, ಸೋಮಾರಿತನ.

ನಾವು ಹೊರಡ್ತೀವಿ. ರಾಜಮ್ಮ ಬರ್ತಾರೆ. ಚಪಾತಿಗೆ ಹಿಟ್ಟು ಕಲಿಸಿ, ಆಲೂಗಡ್ಡೆ, ದೊಣ್ಣೆಮೆಣಸಿನಕಾಯಿ, ಬಟಾಣಿಯ ಪಲ್ಯ ಮಾಡಲು ಹೇಳು. ಬಂದು ಬಿಡ್ತೀವಿ.. ಅತ್ತೆ ಹೋಗಣ್ವಾ...

ಅತ್ತೆ, ಅಜ್ಜಿ ಇಬ್ಬರೂ ನನ್ನ ವಿಶ್ವಾಸನ ಮಧ್ಯೆ ಹಾದು ಹೋದರು.

ನಮಸ್ಕಾರ ಅಜ್ಜಿ ಕಾಲು ಮುಟ್ಟಿ ಅಜ್ಜಿಗೆ ನಮಸ್ಕಾರ ಮಾಡಿದ ವಿಶ್ವಾಸ್.

ದೇವರು ಚೆನ್ನಾಗಿಟ್ಟಿರ್ಲಿ... ನೀನೇನಾ ಬೊಂಬೆ ಮಾಡೋದು ಹೇಳಿಕೊಡೋನು?.

ವಿಶ್ವಾಸ್ ಮನೆಗೆ ಬಂದಿರುವುದು ಅತ್ತೆಗೆ ಇಷ್ಟವಿಲ್ಲವಷ್ಟೇ. ಆದರೆ ಮನುಷ್ಯ ಸಹಜ ಕುತೂಹಲ ಅಜ್ಜಿಗೆ ಹೆಚ್ಚು.

ಹೂ...

ನಾನು ಬೊಂಬೆಗಳಿಗೆ ಅಲಂಕಾರ ಮಾಡ್ತಾ ಇದ್ದೆ. ಪಟ್ಟದ ಬೊಂಬೆಗೆ ಸೀರೆ ಉಡಿಸೋದರಲ್ಲಿ, ಅದಕ್ಕೆ ನಾಜೂಕು ಒಡವೆ ಮಾಡಿ ಹಾಕೋದರಲ್ಲಿ ರುಕ್ಮಿಣಿಗೆ ಸಮಾನರಿಲ್ಲ ಅಂತ ಹೇಳ್ತಾ ಇದ್ರು ಎಲ್ಲಾ...

ಇವರು ಹೇಳಿಕೊಡೋದು ಆ ತರಹ ಬೊಂಬೆ ಅಲ್ಲ.. ಹತ್ತಿ, ಸ್ಪಂಜು ಇಟ್ಟು, ಕಣ್ಣು ಮೂಗಿಗೆ ಗುಂಡಿ ಇಟ್ಟು, ಮೆತ್ತನೆ ಬಟ್ಟೆಯಲ್ಲಿ ಹೊಲಿಯುತ್ತಾರೆ ಬೊಂಬೇನ... ಈಗ ನಿಮ್ಮ ಪಟ್ಟದ ಬೊಂಬೆ ಅಲಂಕಾರ ಕೇಳೋರು ಯಾರು?... ಅತ್ತೆ ಬೀದಿ ಬಾಗಿಲಲ್ಲಿ ನಿಂತು ಹಿಂತಿರುಗಿ ತಮ್ಮ ಅತ್ತೆಗೆ ಹೇಳಿದರು.

ಅದೂ ನಿಜ ಅನ್ನು. ಅಲ್ಲಪ್ಪ! ಬೊಂಬೆ ಹೇಳಿಕೊಡ್ತಾ ಹೀಗೆ ಊರೂರು ತಿರುಗಿದ್ರೆ ಹೊಟ್ಟೆ ತುಂಬುತ್ತಾ?... ಜೀವನಕ್ಕೆ ಏನು ಮಾಡ್ತಿ?... ಹೆಂಡ್ತಿ.. ಮಕ್ಳು...

ಅಜ್ಜೀ.. ಮೆಲ್ಲನೆ ಉಸುರಿದೆ. ಮನೆಗೆ ಬಂದವರನ್ನು ತೀರಾ ಹೀಗೆ ಕೇಳೋದಾ... ಆತಂಕದಿಂದ ವಿಶ್ವಾಸನತ್ತ ತಿರುಗಿದೆ. ವ್ಯಂಗ್ಯ, ಕೊಂಗು ಅರ್ಥವೇ ಆಗಲಿಲ್ಲವೇನೋ ಎಂಬಂತೆ ನಗುತಲ್ಲಿದ್ದ ಅವನು.

ನಂಗೆ ಇನ್ನೂ ಮದುವೆ ಇಲ್ಲ ಅಜ್ಜೀ.. ಹಾಗಾಗಿ.. ಮಕ್ಕಳೂ ಇಲ್ಲ!. ಬೊಂಬೆ ಮಾಡೋದು ಹೇಳಿಕೊಡೋದು ನನ್ನ ಹವ್ಯಾಸ ಅಷ್ಟೇ. ನನ್ನದೊಂದು ಪುಟ್ಟ ಸಾಫ್ಟ್‌ವೇರ್ ಕಂಪನಿಯಿದೆ. ನಮ್ಮಪ್ಪ ಶುರು ಮಾಡಿರೋದು. ಅದನ್ನ ನೋಡಿಕೊಳ್ತೀನೆ. ಫೋನು, ಕಂಪ್ಯೂಟರ್ ಮೂಲಕವೂ ವ್ಯವಹಾರ ಮಾಡಬಹುದು..

ಹಾಗಾದರೆ ನೀನು ಇಂಜಿನಿಯರಿಂಗ್ ಓದಿದ್ಯಾ?.... ಅಜ್ಜಿಯ ಪ್ರಶ್ನೆ.

ಅತ್ತೆ... ಹೊತ್ತಾಗ್ತಾ ಇದೆ. ಹೋಗೋಣ್ವಾ?.. ನನಗಿಂಥ ಹೆಚ್ಚು ಇರಿಟೇಷನ್ ಅತ್ತೆಯವರಿಗೆ.

ಹೂಂ.. ಯಾಕಜ್ಜಿ.. ನಂಗೆ ಹುಡುಗಿ ಹುಡುಕ್ತೀರಾ?.... ವಿಶ್ವಾಸನ ಪ್ರಶ್ನೆ.

ಅಜ್ಜಿ ನಕ್ಕು ಹೊರನಡೆದರು. ಅತ್ತೆ ನನ್ನತ್ತ ದುರುಗುಟ್ಟಿ ಅರೆಕ್ಷಣ ನೋಡಿ ಹೊರಗೆ ನಡೆದರು. ಇದೊಂದು ಹೊಸ ಪ್ರಾಬ್ಲಂ...

ಯಾಕೆ ಮೋಡಂ ನಾನು ಮಾತಾಡಿದ್ದು ಸರಿಗಿರಲಿಲ್ಲವೇ? ನಿಮ್ಗೆ ಕೋಪ ಬಂದಿದ್ಯ?.. ವಿಶ್ವಾಸ್ ನನ್ನತ್ತ ತಿರುಗಿ ಹುಬ್ಬೇರಿಸಿದ.

ತಲೆಯಾಡಿಸಿದೆ. ಹೌದು, ಇಲ್ಲ... ಏನು ಬೇಕಾದರೂ ಅಂದುಕೊಳ್ಳಬಹುದು.. ಆ ರೀತಿ ತಲೆಯಾಡಿಸಿದೆ.

ಬನ್ನಿ ನಿಮಗೆ ಬೇಕಾದ ಪುಸ್ತಕಗಳ್ನ ಆರಿಸಿಕೊಳ್ಳಿ... ಆದಷ್ಟು ಬೇಗ ಇವನು ಹೋದರೆ ಸಾಕು.

ನನ್ನ ಹಿಂದೆಯೇ ಮೆಟ್ಟಿಲು ಹತ್ತಿದ ವಿಶ್ವಾಸ್.

ಅಯ್ಯೋ... ಹುಡುಗಿ ಹುಡುಕಿದರೆ ನಿಮ್ಮ ಮೊಮ್ಮಗನ ಹೆಂಡತಿಯ ಹಾಗೆ ಇರೋ ಹುಡುಗೀ ಹುಡುಕಿ ಅಂತ ನಿಮ್ಮ ಅಜ್ಜಿಗೆ ಹೇಳಬೇಕಿತ್ತು...... ಇರ್ರೀ..... ಹೇಳಿ ಬಂದ್ಬಿಡ್ತೀನಿ...ಗಾಬರಿಯಿಂದ, ಹಿಂತಿರುಗಿದವನ ಕೈ ಹಿಡಿದೆ.

ವಿಶ್ವಾಸ್... ನನ್ನತ್ತ ತಿರುಗಿದ ವಿಶ್ವಾಸ್. ತಟ್ಟನೆ ಕೈ ಬಿಟ್ಟೆ.

ಬೇಡವಾ....? ಸರಿ ಬಿಡಿ..... ಅಂದ ಹಾಗೆ... ನಿಮಗೆ ಅಕ್ಕನೋ ತಂಗಿನೋ ಇದಾರಾ?...

ಇಲ್ಲ ಯಾಕೆ?...

ಅರೆ... ಮದುವೆ ಮಾಡಿಕೊಳೋಕ್ಕೆ!...

ಕಷ್ಟಪಟ್ಟು ಬರುತ್ತಿದ್ದ ನಗೆಯನ್ನು ತಡೆದುಕೊಂಡೆ.

ಅಕ್ಕ ಇದ್ದಿದ್ರೆ ಹೇಗೆ?.. ಅವಳಿಗೆ ಮದುವೆಯಾಗಿರುತ್ತಿತ್ತು... ತಂಗಿ ಇದ್ದಿದ್ರೂ ಆಗ್ತಿತ್ತು... ಒಂದು ವೇಳೆ ಆಗಿರದಿದ್ದರೆ ನಿಮಗಿಂಥ ಹಿರಿಯಳಿರ್ತಿದ್ರಲ್ವಾ... ಮದುವೆ ಹೇಗೆ?...

ನನ್ನ ವಯಸ್ಸು ಎಷ್ಟು ಅಂತ ಅಂದಾಜು ಮಾಡಿದ್ದೀರಾ?... ನಗೆ ಮಾಸುವುದೇ ಇಲ್ಲ.. ಅವನ ಮುಖದಲ್ಲಿ.

ಅ್ಞಂ... ಹಾಗೆಲ್ಲಾ ಏನು ಮಾಡಿಲ್ಲ... ಮೆಲ್ಲನೆ ಹೇಳಿದೆ. ಸುಮಾರು ಇಪ್ಪತ್ತಾರು, ಇಪ್ಪತ್ತೇಳು ವರ್ಷದ ಹುಡುಗ ಎಂದು ಅಂದಾಜು ಮಾಡಿದ್ದೆ.

ಆಹಾ... ಸುಳ್ಳು... ಹೊಸ ಪರಿಚಯ ಆದಾಗ ಆ ವ್ಯಕ್ತಿಯ ವಯಸ್ಸಿನ ಅಂದಾಜು ಮಾಡೇ ಮಾಡ್ತೀವಿ.... ಅದು ಮನುಷ್ಯ ಸಹಜ ಗುಣಾರ್ರೀ... ನಿಮಗೆ! ಹೇಳಲ್ಲ ಬಿಡಿ, ನೀವೂ ಹೇಳಬೇಡಿ.. ನಂಗೆ ಗೊತ್ತು... ನಾನು ನೀವೂ ಒಂದೇ ವಯಸ್ಸಿನವ್ರು ರೀ......

ಇಲ್ಲ... ನಂಗೆ ಮೂವತ್ನಾಲ್ಕು ವರ್ಷ ಈಗ...

ನಂಗೂ ಅಷ್ಟೇ...

ತಟ್ಟನೆ ಅವನತ್ತ ತಿರುಗಿ ಅವನ ಮುಖವನ್ನು ನಿಟ್ಟಿಸಿದೆ.

ಸುಳ್ಳು....

ಹಾಗೇ ಅಂದ್ಕೊಳಿ.. ವಯಸ್ಸು ಮುಖ್ಯವಲ್ಲ ರೀ.. ಪ್ರೀತಿ ಮುಖ್ಯ... ಆಕರ್ಷಣೆ ಮುಖ್ಯ... ನನಗಂತೂ ಸೌಂದರ್ಯ ತುಂಬಾ ಮುಖ್ಯ!.. ಅದಕ್ಕೆ ಕೇಳಿದ್ದು.. ನಿಮಗೆ ಅಕ್ಕ ತಂಗಿ ಇದಾರಾ..... ಮದುವೆ ಆಗಿಲ್ಲದವರು ಅಂತ... ಮಾತು ಹೆಚ್ಚು ಆಡಿದಷ್ಟು ಸಲಿಗೆ ಹೆಚ್ಚು.

ಈ ಬೀರೂಲ್ಲಿರೋದೆಲ್ಲಾ ನನ್ನ ಬುಕ್ಸು.. ನಿಮಗೆ ಯಾವುದು ಬೇಕೋ ತೊಗೊಳಿ... ಮಾತಾಡುತ್ತಾ ಆಡುತ್ತಾ ನನ್ನ ರೂಮು ಹೊಕ್ಕಿದ್ವಿ... ನನಗೆ ಅಸಹಜ ಎಂದನ್ನಿಸಲೇ ಇಲ್ಲ...

ವ್ಹಾವ್... ಎಷ್ಟೊಂದು ಪುಸ್ತಕಗಳ್ನ ಕಲೆಕ್ಟ್ ಮಾಡಿದ್ದೀರಿ... ಸುಮ್ನೆ ಕೋಣೆಯ ಅಂದ ಹೆಚ್ಚಿಸಲು ಈ ಬುಕ್ಸುಗಳೋ ಅಥವಾ ನಿಜವಾಗಿ ಇವೆಲ್ಲಾ ಓದಿದ್ದೀರೋ?.. ಓ... ಸಾರಿ.. ಸಾರಿ.. ಕೋಪ ಮಾಡ್ಕೋಬೇಡಿ... ತುಂಬಾ ಚೆನ್ನಾಗಿರೋರು ಹೆಚ್ಚು ಓದಲ್ಲ.... ಏನೂ ಮಾಡಲ್ಲ... ಅವರ ಸೌಂದರ್ಯ ನೋಡಿಕೊಳ್ಳುವುದರಲ್ಲೇ ಸಾಕಾಗುತ್ತದೆ ಅಂತ ಅಂದುಕೊಂಡಿದ್ದೆ.... ಸಾರಿ ಹೇಳಿದ್ನಲ್ಲ!... ನಿಮ್ಮ ರೂಮ್ ತುಂಬಾ ಚೆನ್ನಾಗಿದೆ.

ಕೋಣೆಯ ಸುತ್ತಾ ಕಣ್ಣಾಡಿಸಿದ. ಎಲ್ಲಾ ನೀಟಾಗಿ ಇದ್ದರೂ ಇವನು ಹೀಗೆ ಕಣ್ಣಾಡಿಸಿದ್ದು. ನನಗೆ ಇರುಸುಮುರಿಸಾಯಿತು.

ಓ... ತ್ರಿವೇಣಿಯವರ ಕಾದಂಬರಿಗಳು... ಹೈಸ್ಕೂಲಿನಲ್ಲಿ ಇದ್ದಾಗ ಓದಿದ್ದು. ಒಂದೆರೆಡು ತೊಗೊಂಡು ಹೋಗ್ಲಾ?

ತೊಗೊಳಿ...

ಹೃದಯ ಗೀತೆ, ಬಾನು ಬೆಳಗಿತು, ಹೆಂಡತಿಯ ಹೆಸರು... ಹಾಂ.. ಈ ಮೂರು ತೊಗೊಂಡು ಹೋಗ್ಲಾ...

ಅವನು ಪುಸ್ತಕಗಳನ್ನು ಕೈಗೆತ್ತಿಕೊಂಡ ಮೇಲೆ ಬೀರುವಿನ ಬಾಗಿಲು ಹಾಕಿ. ಅವನಿಗಿಂಥ ಮುಂಚಿತವಾಗಿ ಕೋಣೆಯಿಂದ ಹೊರಬಂದೆ.

ತುಂಬಾ ರೊಮ್ಯಾಂಟಿಕ್ ಆಗಿ ಇರುತ್ತಲ್ವಾ ತ್ರಿವೇಣಿಯವರ ಕಾದಂಬರಿಗಳು?...

ಹೂ... ಸುಮ್ಮನೆ ಹೂಂಗುಟ್ಟಿ ಮೆಟ್ಟಿಲಿಳಿಯ ತೊಡಗಿದೆ.

ಎಲ್ರೀ?... ಶರಪಂಜರ, ಬೆಳ್ಳಿಮೋಡ... ರೊಮ್ಯಾಂಟಿಕಾ?. ಸುಮ್ನೆ ಹೂಂಗುಟ್ಟುತ್ತಿದ್ದೀರಿ... ಹಿಂದೆಯೇ ಬಂದ ವಿಶ್ವಾಸ್.

(ಸಶೇಷ)